**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 1 ಫ್ರಾ.ಸಾ. : 1**

ಸಾಕ್ಷಿಯ ಹೆಸರು : ಅರುಣಕುಮಾರ ಕೊಳೂರು

ತಂದೆಯ ಹೆಸರು : ಗುರಣ್ಣ

ವಯಸ್ಸು : 53 ವರ್ಷ

ಕೆಲಸ : ಡಿ ಎಸ್ ಪಿ , ಎಸಿಬಿ , ಬಳ್ಳಾರಿ

ವಾಸ : ಬಳ್ಳಾರಿ

**ದಿನಾಂಕಃ 05-01-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನವೆಂಬರ್ 2002 ರಿಂದ ನವೆಂಬರ್ 2005 ರ ನಡುವೆ ನಾನು ಕಾರವಾರ ಲೋಕಾಯುಕ್ತ ಠಾಣೆಯಲ್ಲಿ ಪೋಲೀಸ ನಿರೀಕ್ಷಕನಾಗಿ ಕೆಲಸ ಮಾಡಿದ್ದೆನು.

2. ದಿನಾಂಕಃ 16.08.2005 ರಂದು ಕಾನಗೋಡ ಗ್ರಾಮಪಂಚಯತಿಯ ಸದಸ್ಯರಾದ ಮಾರುತಿ ಫಕೀರ ನಾಯ್ಕ ಎನ್ನುವವರು ತಮ್ಮ ಗ್ರಾಮ ಪಂಚಾಯತಿ ಅಡಿ ಸ್ವಚ್ಛ ಗ್ರಾಮ ಯೋಜನೆ ಅಡಿ 20 ಲಕ್ಷ ರೂ. ಗ್ರಾಮಪಂಚಾಯತಿಗೆ ಅನುದಾನ ಬಂದಿದ್ದು , 210 ಶೌಚಾಲಯಗಳು ಕಟ್ಟಬೇಕಾಗಿತ್ತು , ಕಟ್ಟಿಲ್ಲಾ , ಹಣ ದುರುಪಯೋಗ ಆಗಿದೆ , ಈ ಬಗ್ಗೆ ತನಿಖೆ ಮಾಡಬೇಕೆಂದು ಅರ್ಜಿ ಕೊಟ್ಟರು . ಅವರು ಕೊಟ್ಟ ಅರ್ಜಿ ನೋಡುತ್ತಿದ್ದೇನೆ . ಅದನ್ನು ನಿಪಿ.1 ಎಂದು ಗುರುತಿಸಲಾಯಿತು.

3. ನಿಪಿ.1 ರ ಅರ್ಜಿಯಲ್ಲಿ ಹೇಳಿದ ಆಪಾದನೆಗಳ ಬಗ್ಗೆ ನಾನು ಕಾನಗೋಡು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದಾಗ 210 ಶೌಚಾಲಯಗಳಲ್ಲಿ 135 ಶೌಚಾಲಯಗಳು ಮಾತ್ರ ನಿರ್ಮಾಣ ಮಾಡಿರುವುದು ಕಂಡು ಬಂತು , ಉಳಿದ ಶೌಚಾಲಯಗಳು ಕಟ್ಟಿರಲಿಲ್ಲಾ , ಆದರೂ ಅವು ಪೂರ್ಣಗೊಂಡಿದೆ ಎಂದು ಈ ಕೇಸಿನ 3 ನೇ ಆರೋಪಿ ವರದಿ ಸಲ್ಲಿಸಿದ್ದ ಕಾರಣದಿಂದ ಗ್ರಾಮಪಂಚಾಯತಿಯ ಅಧ್ಯಕ್ಷ , ಕಾರ್ಯದರ್ಶಿ ಮತ್ತು ವರದಿ ಸಲ್ಲಿಸಿದ 3 ನೇ ಆರೋಪಿ ಮೇಲೆ ಪ್ರಕರಣ ನೋಂದಾಯಿಸಿ ತನಿಖೆ ಮುಂದುವರಿಸಲು ಅನುಮತಿಯನ್ನು ಕೋರಿ ನಾನು ಲೋಕಾಯುಕ್ತ ಅಧೀಕ್ಷಕರಿಗೆ ಮನವಿ ಪತ್ರ ಬರೆದೆನು. ಸದರಿ ಪತ್ರದ ನಕಲು ನೋಡುತ್ತಾ ಇದ್ದೇನೆ. ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ಸಹಿಯನ್ನು ನಿಪಿ .2 ಎ ಎಂದು ಗುರುತಿಸಲಾಯಿತು. ದಿನಾಂಕಃ 06.09.2005 ರಂದು ಮಾನ್ಯ ಅಧೀಕ್ಷಕರರಿಂದ ಅನುಮತಿ ಬಂದ ಮೇರೆ ಪ್ರ ವ ವರದಿಯನ್ನು ಗುನ್ನಾ ನಂ .2/2005 ರಲ್ಲಿ ನೋಂದಾಯಿಸಿ

ನ್ಯಾಯಾಲಯಕ್ಕೆ ಮತ್ತು ಉನ್ನತ ಅಧಿಕಾರಿಗಳಿಗೆ ಸಲ್ಲಿಸಿದೆನು . ನಾನು ನೋಂದಾಯಿಸಿದ ಪ್ರ ವ ವರದಿ ನೋಡುತ್ತಿದ್ದು , ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ಆ ಬಗ್ಗೆ ನನ್ನ ಸಹಿಯನ್ನು ನಿಪಿ.3 ಎ ಎಂದು ಗುರುತಿಸಲಾಯಿತು.

4. ಅದೇ ದಿನ ಸಿಬ್ಬಂದಿಯ ಜೊತೆ ಸಿದ್ದಾಪುರಕ್ಕೆ ಭೇಟಿ ನೀಡಿದೆ . ಕಾನಗೋಡ ಗ್ರಾಮಪಂಚಾಯತಿಯ ಕಾರ್ಯದರ್ಶಿಯನ್ನು ತನಿಖೆಗೆ ಕರೆಯಲು ಕಳಿಸಿದ ವೇಳೆ ಅವರು ರಜೆಯ ಮೇಲೆ ಇರುವುದು ಕಂಡು ಬಂತು.

5. ದಿನಾಂಕಃ 08.09.2005 ರಂದು ಸಿದ್ದಾಪುರ ತಾಲೂಕ ಪಂಚಾಯತಿಯ ಕಾರ್ಯನಿರ್ವಹಣಾಧಿಕಾರಿ ಅವರ ಕಚೇರಿಗೆ ಭೇಟಿ ನೀಡಿದೆ . ಚಾಸಾ.2 , 3 ರವರನ್ನು ಪಂಚರಾಗಿ ಕರೆಸಿಕೊಳ್ಳುವ ಬಗ್ಗೆ ಅವರ ಅಧಿಕಾರಿಗಳಿಗೆ ಪತ್ರ ಬರೆದೆ . ಸದರಿ ಪತ್ರಗಳನ್ನು ನೋಡುತ್ತಾ ಇದ್ದೇನೆ. ಅವನ್ನು ನಿಪಿ.4 ಮತ್ತು ನಿಪಿ.5 ಎಂದು ಗುರುತಿಸಲಾಯಿತು. ಚಾಸಾ.2 , 3 ಮಧ್ಯಾಹ್ನ 1 ಗಂಟೆಗೆ ನನ್ನ ಮುಂದೆ ಸಿದ್ದಾಪುರ ತಾಲೂಕು ಪಂಚಾಯತಿ ಕಚೇರಿಗೆ ಹಾಜರಾದರು . ಚಾಸಾ.3 ನ್ನು ಪಂಚರಾಗಿ ನೇಮಿಸಿದ ಬಗ್ಗೆ ಸಿದ್ದಾಪುರ ತಹಶೀಲ್ದಾರ ಅವರು ಕಚೇರಿ ಆದೇಶ ಸಹ ಮಾಡಿ ಕಳಿಸಿದ್ದರು. ಸದರಿ ಕಚೇರಿ ಆದೇಶ ನೋಡುತ್ತಿದ್ದು , ಅದನ್ನು ನಿಪಿ.6 ಎಂದು ಗುರುತಿಸಲಾಯಿತು. ಚಾಸಾ.2 , 3 ರವರಿಗೆ ಪ್ರಕರಣದ ಹಿನ್ನೆಲೆಯನ್ನು ತಿಳಿಸಿಕೊಟ್ಟೆನು . ಕಾನಗೋಡ ಗ್ರಾಮ ಪಂಚಾಯತಿಯಲ್ಲಿ ದಾಖಲಾತಿಗಳ ಪರಿಶೀಲನೆ ಮಾಡಿ ಜಪ್ತಿ ಮಾಡುವ ಬಗ್ಗೆ ಪಂಚರಾಗಿ ಬರುವಂತೆ ಕೋರಿಕೊಂಡೆನು.

6. ಅದೇ ದಿನ ನಾನು ಚಾಸಾ .2, 3 ರವರನ್ನು ಕರೆದುಕೊಂಡು ಕಾನಗೋಡ ಗ್ರಾಮ ಪಂಚಾಯತಿಗೆ ಭೇಟಿ ನೀಡಿದೆನು. ಚಾಸಾ.2, 3 ಸಮಕ್ಷಮ ಕಾನಗೋಡ ಗ್ರಾಮಪಂಚಾಯತಿಯ ದಾಖಲಾತಿಗಳನ್ನು ಪರಿಶೀಲನೆ ಮಾಡಿ , ಪಂಚನಾಮೆಯನ್ನು ಮಧ್ಯಾಹ್ನ 2 ಗಂಟೆಯಿಂದ ಸಂಜೆ 5.30 ರ ನಡುವೆ ತಯಾರಿಸಿದೆನು . ಪರಿಶೀಲನೆ ಮಾಡಿದ 11 ದಾಖಲಾತಿಗಳನ್ನು ಜಪ್ತಿಪಡಿಸಿಕೊಂಡೆನು. ಈ ಬಗ್ಗೆ ನಾನು ಮಾಡಿದ ಪಂಚನಾಮೆ ನೋಡುತ್ತಿದ್ದೇನೆ. ಅದನ್ನು ನಿಪಿ.7 ಎಂದು ಗುರುತಿಸಲಾಯಿತು. ಆ ಬಗ್ಗೆ ನಿಪಿ.7 ಎ ನನ್ನ ಸಹಿ ಇದೆ.

7. ನಾವು ಜಪ್ತಿಪಡಿಸಿಕೊಂಡ 11 ದಾಖಲೆಗಳು ಅಂದರೆ ಸ್ವಚ್ಛ ಗ್ರಾಮ ಯೋಜನೆಯ ಉದ್ಘಾಟನಾ ಸಮಾರಂಭದ ಆಮಂತ್ರಣ ಪತ್ರಿಕೆ ನೋಡುತ್ತಾ ಇದ್ದೇನೆ . ಅದನ್ನು ನಿಪಿ.8 ಎಂದು ಗುರುತಿಸಲಾಯಿತು. ಸ್ವಚ್ಛ ಗ್ರಾಮ ಯೋಜನೆಯ ಕ್ರಿಯಾ ಯೋಜನಾ ಪ್ರತಿ ನೋಡುತ್ತಾ ಇದ್ದೇನೆ. ಅದನ್ನು ನಿಪಿ.9 ಎಂದು ಗುರುತಿಸಲಾಯಿತು. ನಿಪಿ.9 ರಲ್ಲಿ ಪುಟ ಸಂಖ್ಯೆ 12 ರಿಂದ 15 ರಲ್ಲಿ ಇರುವ ಸ್ವಚ್ಛ ಗ್ರಾಮ ಯೋಜನೆಯ ಕ್ರಿಯಾ ಯೋಜನೆಯ ಪಟ್ಟಿ ನೋಡುತ್ತಾ ಇದ್ದೇನೆ.

ಅದನ್ನು ನಿಪಿ.10 ಎಂದು ಗುರುತಿಸಲಾಯಿತು. ಸ್ವಚ್ಛ ಗ್ರಾಮ ಯೋಜನೆಯ ಠರಾವ್ ರಜಿಸ್ಟರ್ ಬುಕ್ ನೋಡುತ್ತಾ ಇದ್ದೇನೆ. ಅದನ್ನು ನಿಪಿ.11 ಎಂದು ಗುರುತಿಸಲಾಯಿತು. ಸ್ವಚ್ಛ ಗ್ರಾಮ ಯೋಜನೆಯ ಶೌಚಾಲಯ ರಜಿಸ್ಟರ ನೋಡುತ್ತಾ ಇದ್ದೇನೆ. ಅದನ್ನು ನಿಪಿ.12 ಎಂದು ಗುರುತಿಸಲಾಯಿತು. ಸ್ವಚ್ಛ ಗ್ರಾಮ ಯೋಜನೆಯ ನಗದು ಪುಸ್ತಕ ನೋಡುತ್ತಾ ಇದ್ದೇನೆ. ಅದನ್ನು ನಿಪಿ.13 ಎಂದು ಗುರುತಿಸಲಾಯಿತು. ಆದಿ ಶಕ್ತಿ ಇಂಡಸ್ಟ್ರೀಸ್ ಶಿರಳಗಿ ರವರು ನೀಡಿದ 3 ರಶೀದಿಗಳನ್ನು ನೋಡುತ್ತಾ ಇದ್ದೇನೆ. ಅವನ್ನು ನಿಪಿ.14 , ನಿಪಿ.15 ಮತ್ತು ನಿಪಿ.16 ಎಂದು ಗುರುತಿಸಲಾಯಿತು. ಆದಿ ಶಕ್ತಿ ಇಂಡಸ್ಟ್ರೀಸ್ ಶಿರಳಗಿ ಮಾಲೀಕ ಕೊಟ್ಟಿದ್ದ ಅರ್ಜಿ ನೋಡುತ್ತಾ ಇದ್ದೇನೆ. ಅದನ್ನು ನಿಪಿ.17 ಎಂದು ಗುರುತಿಸಲಾಯಿತು. ಸ್ವಚ್ಛ ಗ್ರಾಮ ಯೋಜನೆಯ ಅಡಿ ಸಂಬಂಧಪಟ್ಟ 5 ಸುತ್ತೋಲೆಗಳನ್ನು ನೋಡುತ್ತಾ ಇದ್ದೇನೆ. ಅವುಗಳನ್ನು ನಿಪಿ.18, ನಿಪಿ.19, ನಿಪಿ.20, ನಿಪಿ.21 ಮತ್ತು ನಿಪಿ.22 ಎಂದು ಗುರುತಿಸಲಾಯಿತು. ಸ್ವಚ್ಛ ಗ್ರಾಮ ಯೋಜನೆ 2002-2003 ಎಂದು ಬರೆದಿರುವ ಹಾಳೆ ಮತ್ತು ಅದಕ್ಕೆ ಲಗತ್ತಿಸಿರುವ 16 ಪುಟಗಳನ್ನು ನೋಡುತ್ತಾ ಇದ್ದೇನೆ. ಅದನ್ನು ನಿಪಿ.23 ಎಂದು ಗುರುತಿಸಲಾಯಿತು. ಶಿರಸಿ ಜಿಲ್ಲಾ ಪಂಚಾಯತಿ ವಿಭಾಗದ ಕಾರ್ಯನಿರ್ವಾಹಕ ಇಂಜೀನಿಯರ ಇವರು ಸಿದ್ದಾಪುರ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬರೆದ ಪತ್ರಗಳನ್ನು ನೋಡುತ್ತಾ ಇದ್ದೇನೆ. ಅವನ್ನು ನಿಪಿ.24 ಮತ್ತು ನಿಪಿ.25 ಎಂದು ಗುರುತಿಸಲಾಯಿತು. ನಿಪಿ.8 ರಿಂದ 25 ರ ದಾಖಲಾತಿಗಳನ್ನು ನಿಪಿ.7 ಪಂಚನಾಮೆಯಡಿ ಜಪ್ತಿಪಡಿಸಿಕೊಂಡೆನು.

(ಈ ಹಂತದಲ್ಲಿ 5.00 ಗಂಟೆ ಆಗಿದ್ದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ

(ಟಿ.ಜಿ.ಶಿವಶಂಕರೇಗೌಡ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ